"ಮಧುರ ಮಕ್ಕಳೇ - ತಂದೆ ನಿಮಗೆ ಜ್ಞಾನದ ಕಸ್ತೂರಿಯನ್ನು ಕೊಡುತ್ತಿದ್ದಾರೆ ಅಂದಾಗ ಅಂತಹ ತಂದೆಯ ಮೇಲೆ ಬಲಿಹಾರಿ ಆಗಬೇಕು, ತಂದೆ-ತಾಯಿಯನ್ನು ಫಾಲೋ ಮಾಡಿ ಪಾವನರಾಗುವ ಸೇವೆಯನ್ನು ಮಾಡಿ"

ಪ್ರಶ್ನೆ: ಯಾರು ಅದೃಷ್ಟವಂತ ಮಕ್ಕಳಿದ್ದಾರೋ ಅವರ ಚಿಹ್ನೆ ಏನಾಗಿದೆ?

ಉತ್ತರ: ಅದೃಷ್ಟವಂತರು ಅರ್ಥಾತ್ ಭಾಗ್ಯಶಾಲಿ ಮಕ್ಕಳು ಚೆನ್ನಾಗಿ ಓದುತ್ತಾರೆ ಹಾಗೂ ಓದಿಸುತ್ತಾರೆ. ಅವರು ಪಕ್ಕಾ ನಿಶ್ಚಯಬುದ್ಧಿಯವರಾಗಿರುತ್ತಾರೆ. ಎಂದೂ ಸಹ ತಂದೆಯ ಕೈಯನ್ನು ಬಿಡಬಾರದು. ವ್ಯಾಪಾರ ಮುಂತಾದುವುಗಳಲ್ಲಿ ಇರುತ್ತಾ ಈ ಕೋರ್ಸನ್ನು ಮಾಡುತ್ತಾರೆ. ಬಹಳ ಖುಷಿಯಾಗಿರುತ್ತಾರೆ. ಆದರೆ ಯಾರ ಅದೃಷ್ಟದಲ್ಲಿ ಇರುವುದಿಲ್ಲವೋ, ಅವರು ಲಾಟರಿ ಸಿಕ್ಕಿದರೂ ಸಹ ಕಳೆದುಕೊಳ್ಳುತ್ತಾರೆ.

ಗೀತೆ: ಭೋಲಾನಾಥನಗಿಂತ ಭಿನ್ನ ..........................................................

ಓಂ ಶಾಂತಿ. ಯಾರಿಗೆ ಏನೂ ಗೊತ್ತಿಲ್ಲವೋ ಅವರಿಗೆ ಭೋಲಾನಾಥ (ಮುಗ್ದರು) ಎಂದು ಕರೆಯುತ್ತಾರೆ. ಈಗ ಮನುಷ್ಯರು ಎಷ್ಟು ಮುಗ್ದರಾಗಿದ್ದಾರೆ, ಮಾಯೆ ಎಷ್ಟು ಮುಗ್ದರನ್ನಾಗಿ ಮಾಡುತ್ತದೆ ಎಂದು ನಿಮಗೆ ಗೊತ್ತಿದೆ. ತಂದೆ ಯಾರು ಎನ್ನುವುದೂ ಸಹ ಗೊತ್ತಿಲ್ಲ. ಕರೆಯುವುದು ಮತ್ತು ತಿಳಿದುಕೊಳ್ಳುವುದಿಲ್ಲ, ಮತ್ತೆ ತಂದೆಯಿಂದ ಯಾವ ಆಸ್ತಿ ಸಿಗುತ್ತದೆ ಎಂದೂ ಸಹ ಗೊತ್ತಿಲ್ಲ. ಅಂದಾಗ ಮುಗ್ದರಲ್ಲವೇ. ಮುಗ್ದರು ಎಂದಾದರೂ ಹೇಳಿ, ಬುದ್ದು ಎಂದಾದರೂ ಹೇಳಿ ಒಂದೇ ಮಾತಾಗಿದೆ. ಈ ಸಮಯದಲ್ಲಿ ಎಲ್ಲರೂ ಬುದ್ಧಿಹೀನರಾಗಿದ್ದಾರೆ, ಅವರಿಗೆ ಬುದ್ಧಿಹೀನತೆ ಅಧಿಕಾರ ಇರುತ್ತದೆ. ಮಕ್ಕಳೇ ನೀವು ತಂದೆಯನ್ನು ತಿಳಿದುಕೊಂಡಿದ್ದೀರಿ ಹಾಗೂ ಅವರಿಂದ ಕೇಳುತ್ತಿದ್ದೀರಿ. ಬಾಕಿ ಆತ್ಮರು ದೇಹಿ-ಅಭಿಮಾನಿ ಆಗುವ ಪರಿಶ್ರಮ ಮಾಡಬೇಕಾಗಿದೆ. ತಂದೆಯೇ ಸ್ವಯಂ ಕುಳಿತು ಮಕ್ಕಳೇ ಆತ್ಮಾಭಿಮಾನಿ ಆಗಿ ಎಂದು ಕಲಿಸುತ್ತಾರೆ. ತಮ್ಮನ್ನು ತಾವು ಪಾರಲೌಕಿಕ ತಂದೆಯ ಮಕ್ಕಳೆಂದು ನಿಶ್ಚಯ ಮಾಡಿಕೊಳ್ಳಿ. ಲೌಕಿಕ ತಂದೆಯನ್ನಂತೂ ತಿಳಿದುಕೊಂಡಿದ್ದೀರಿ ಬಾಕಿ ನೀವು ಅಷ್ಟೂ ಮುಗ್ದರಾಗಿದ್ದೀರಿ, ಪಾರಲೌಕಿಕ ತಂದೆಯ ಬಗ್ಗೆ ತಿಳಿದುಕೊಂಡಿಲ್ಲ. ಈಗ ಈ ಮಾತುಗಳನ್ನು ಪರಮಪಿತ ಪರಮಾತ್ಮನೇ ತಿಳಿಸುತ್ತಾರೆಂದು ನಿಮ್ಮ ಬುದ್ಧಿಯಲ್ಲಿದೆ. ನೀವು ಚಿಕ್ಕ ಮಕ್ಕಳಲ್ಲ ನಿಮ್ಮ ಇಂದ್ರಿಯಗಳಂತೂ ದೊಡ್ಡದಾಗಿದೆ. ಒಂದುವೇಳೆ ತಮ್ಮನ್ನು ದೇಹವೆಂದು ತಿಳಿದುಕೊಂಡರೆ ತಂದೆಯನ್ನು ನೆನಪು ಮಾಡಲು ಸಾಧ್ಯವಿಲ್ಲ. ತಮ್ಮನ್ನು ತಾವು ಆತ್ಮಾಭಿಮಾನಿ ಎಂದು ತಿಳಿಯಿರಿ. ಮಕ್ಕಳೇ-ಮಕ್ಕಳೇ ಎಂದು ತಂದೆ ಶರೀರಕ್ಕೆ ಹೇಳುವುದಿಲ್ಲ ಆತ್ಮರಿಗೆ ಹೇಳುತ್ತಾರೆ. ಹಾಗೂ ಮಕ್ಕಳು ಆತ್ಮರೆಲ್ಲರೂ ಶಿವನಿಗೆ (ಪರಮಾತ್ಮನಿಗೆ) ತಂದೆ ಎಂದು ಕರೆಯುತ್ತಾರೆ, ಯಾವುದೇ ಆತ್ಮ ಅಥವಾ ಬ್ರಹ್ಮನಿಗೆ ಕರೆಯುವುದಿಲ್ಲ. ಇವರೂ (ಬ್ರಹ್ಮಾಬಾಬಾ) ಸಹ ತಂದೆಯ ಮಗು ಆಗಿದ್ದಾರೆ. ಈಗ ನಿಮಗೆ ಗೊತ್ತಿದೆ ನಮ್ಮ ಬೇಹದ್ದಿನ ತಂದೆ ಇವರಲ್ಲಿ (ಬ್ರಹ್ಮನ ಶರೀರದಲ್ಲಿ) ಬಂದಿದ್ದಾರೆ. ಅಂದಾಗ ತಂದೆಯನ್ನು ನೆನಪು ಮಾಡಬೇಕು. 84 ಜನ್ಮದ ಚಕ್ರವನ್ನೂ ಸಹ ನೆನಪು ಮಾಡಬೇಕಾಗಿದೆ. ಇದು ಬೇಹದ್ದಿನ 5000 ವರ್ಷದ ನಾಟಕವಾಗಿದೆ. ನೀವು ಪಾತ್ರಧಾರರಾಗಿದ್ದೀರಿ. ಈಗ ನಿಮಗೆ ಡ್ರಾಮಾದ ಆದಿ-ಮಧ್ಯ-ಅಂತ್ಯದ ಬಗ್ಗೆ ತಿಳಿದಿದೆ. ಪೂರ್ತಿ ಚಕ್ರವನ್ನು ಬುದ್ಧಿಯಲ್ಲಿ ತಿರುಗಿಸಬೇಕು. ನಿಮ್ಮ ಹೆಸರು ಎಷ್ಟು ಪ್ರಸಿದ್ಧವಾಗಿದೆ. ಸ್ವದರ್ಶನ ಚಕ್ರಧಾರಿ ನೀವು ಮತ್ತೆ ಭವಿಷ್ಯದಲ್ಲಿ ಚಕ್ರವರ್ತಿ ರಾಜರಾಗುತ್ತೀರಿ. 84 ಜನ್ಮಗಳು ಚಕ್ರದ ಕಥೆಯಲ್ಲಿ ಸಿದ್ಧವಾಗುತ್ತದೆ. ಈಗ ನೀವು ತಂದೆಯವರಾಗಿಬಿಟ್ಟಿದ್ದೀರಿ, ಈ ಸ್ಮೃತಿಯಲ್ಲಿ ಇರಬೇಕಾಗಿದೆ. ಎಷ್ಟು ಅಂಧರಿಗೆ ಊರುಗೋಲು ಆಗುತ್ತೀರೋ ಅಷ್ಟು ಇವರು ದಯಾಹೃದಯಿ ಎಂದು ತಂದೆ ತಿಳಿದುಕೊಳ್ಳುತ್ತಾರೆ. ದಯೆ ಮಾಡಿ, ಕೃಪೆ ತೋರಿಸಿ ಎಂದು ಹೇಳುತ್ತಾರೆ. ತಂದೆ ಎಂತಹ ದಯೆ ತೋರಿಸುತ್ತಾರೆಂದು ನಿಮಗೆ ಗೊತ್ತಿದೆ. ತಂದೆ ಸಿಕ್ಕಿದ್ದಾರೆಂದಾಗ ಎಷ್ಟು ಖುಷಿ ಇರಬೇಕಲ್ಲವೇ. ಈಗ ನೀವು ನಿಮ್ಮ ಕಾಲಿನ ಮೇಲೆ ನಿಂತುಕೊಳ್ಳಬೇಕು. ಹೇಗೆ ಸೇವಾಕೇಂದ್ರ ತನ್ನ ಕಾಲಿನ ಮೇಲೆ ನಿಂತಿದ್ದರೆ ತಾವೂ ಸಹ ತಮ್ಮ ಕಾಲಿನ ಮೇಲೆ ನಿಂತುಕೊಳ್ಳಬೇಕು. ಶ್ರೇಷ್ಠಾತಿಶ್ರೇಷ್ಠ ಪುರುಷಾರ್ಥವನ್ನು ಮಾಡಬೇಕು., ತಂದೆ-ತಾಯಿಯನ್ನು ಅನುಕರಣೆ ಮಾಡಬೇಕು. ಲೌಕಿಕದಲ್ಲಿ ಮಕ್ಕಳು ತಂದೆಯನ್ನು ಫಾಲೋ ಮಾಡಿ ಪತಿತರಾಗಿಬಿಡುತ್ತಾರೆ. ಇಲ್ಲಾದರೆ ಪಾರಲೌಕಿಕ ತಂದೆಯ ಶ್ರೀಮತದಂತೆ ನಡೆಯಬೇಕೆಂದು ಹೇಳಲಾಗುತ್ತದೆ. ಬಾಬಾ-ಮಮ್ಮಾರವರ ವ್ಯಾಪಾರವನ್ನು ನೋಡಿ. ಪತಿತರನ್ನು ಪಾವನರನ್ನಾಗಿ ಮಾಡುವ ವ್ಯಾಪಾರವಾಗಿದೆ. ಬಾಕಿ ಅನ್ಯ ಧರ್ಮಪಿತರು ಯಾವಾಗ ಬರುತ್ತಾರೋ ಅವರ ಧರ್ಮದ ಆತ್ಮರು ಮೇಲಿಂದ ಬರುತ್ತಾರೆ. ಅಲ್ಲಿ ಕನ್ವರ್ಟ್ (ಪರಿವರ್ತನೆ) ಆಗುವ ಮಾತೇ ಇಲ್ಲ. ಇಲ್ಲಿ ಕನ್ವರ್ಟ್ ಮಾಡಬೇಕಾಗುತ್ತದೆ, ಶೂದ್ರರನ್ನು ಬ್ರಾಹ್ಮಣರನ್ನಾಗಿ ಮಾಡಬೇಕು. ಇದಕ್ಕೆ ನೀವು ಪರಿಶ್ರಮ ಪಡಬೇಕು. ನೀವು ಎಷ್ಟು ಸಾಹಿತ್ಯ ಪುಸ್ತಕಗಳನ್ನು ಕೊಡುತ್ತೀರಿ. ಅದನ್ನು ನೋಡಿ ಅರೆಯುತ್ತಾರೆ.

ನೀವು ಮಕ್ಕಳು ರೂಪ ಬಸಂತರಾಗಿದ್ದೀರಿ. ಹೇಗೆ ತಂದೆಯೋ ಹಾಗೆಯೇ ಮಕ್ಕಳು. ತಾವು ಜ್ಞಾನದ ಮಳೆಯನ್ನು ಸುರಿಸಬೇಕು. ತ್ರಿಮೂರ್ತಿಯ ಚಿತ್ರ ಬಹಳ ಅವಶ್ಯಕತೆ ಇದೆ, ಇದರಲ್ಲಿ ತಂದೆ ಹಾಗೂ ಆಸ್ತಿ ಎರಡೂ ಬಂದುಬಿಡುತ್ತದೆ. ತಂದೆಯ ವಿನಃ ತಾತನ ಆಸ್ತಿ ಹೇಗೆ ಸಿಗುತ್ತದೆ. ಕೃಷ್ಣನ ಚಿತ್ರ ಎಲ್ಲರಿಗೂ ಇಷ್ಟವಾಗುತ್ತದೆ. ಬಾಕಿ 84 ಜನ್ಮದ ಬರವಣಿಗೆ ಇಷ್ಟ ಆಗುವುದಿಲ್ಲ. ಅವರಿಗೆ ಚಿತ್ರ

ಚೆನ್ನಾಗಿರುತ್ತದೆ, ನಿಮಗೆ ವಿಚಿತ್ರ (ಆತ್ಮ) ಚೆನ್ನಾಗಿರುತ್ತದೆ ಏಕೆಂದರೆ ನಿಮಗೆ ತಂದೆ "ಆತ್ಮಾಭಿಮಾನಿ ಭವ" ಎಂದು ಹೇಳಿದ್ದಾರೆ. ನೀವು ನಿಮ್ಮನ್ನು ವಿಚಿತ್ರ ಎಂದು ತಿಳಿದುಕೊಂಡಿದ್ದೇ ಆದರೆ ವಿಚಿತ್ರ ಪರಮಾತ್ಮನನ್ನೇ ನೆನಪು ಮಾಡುತ್ತೀರಿ. ತಂದೆ ರಚೈತ ಅಂದಾಗ ಅವಶ್ಯವಾಗಿ ಹೊಸ ಪ್ರಪಂಚವನ್ನೇ ರಚನೆ ಮಾಡುತ್ತಾರೆ. ಅದರಲ್ಲಿ ಲಕ್ಷ್ಮೀ-ನಾರಾಯಣರ ರಾಜ್ಯ ಇತ್ತು. ಲಕ್ಷ್ಮೀ-ನಾರಾಯಣರ ಚಿತ್ರವನ್ನೂ ಮಾಡಿದ್ದಾರೆ ಹಾಗೂ ಸರ್ವಗುಣ ಸಂಪನ್ನ, 16 ಕಲಾ ಸಂಪೂರ್ಣರು ಲಕ್ಷ್ಮೀ-ನಾರಾಯಣರು ಮಹಾರಾಜಾ-ಮಹಾರಾಣಿ ಅಂದಾಗ ನಾವು ತಂದೆಯನ್ನು ನೆನಪು ಮಾಡಿ ಆ ರೀತಿ ಆಗಬೇಕೆಂದು ನಶೆ ಇರುತ್ತದೆ. ಸದಾ ಬಾಬಾ-ಬಾಬಾ ಎನ್ನುತ್ತಿರಿ ಹಾಗೂ ಭವಿಷ್ಯ ಪದವಿಯನ್ನೂ ಸಹ ನೆನಪು ಮಾಡಿದ್ದೇ ಆದರೆ ಸತ್ಯಯುಗಕ್ಕೆ ಹೋಗುತ್ತೀರಿ. ಹೇಗೆ ಒಂದು ಉದಾಹರಣೆ "ನಾನು ಹಸು ಆಗಿದ್ದೇನೆ" ಎಂದು ಈ ರೀತಿ ಹೇಳುವುದರಿಂದ ತನ್ನನ್ನು ತಾನು ಹಸು ಎಂದುಕೊಳ್ಳುತ್ತಾರೆ. ಆದರೆ ಹೇಳುವುದರಿಂದ ಆಗುವುದಿಲ್ಲ. ಬಾಕಿ ನಾನು ಆತ್ಮ ನರನಿಂದ ನಾರಾಯಣನಾಗುತ್ತಿದ್ದೇನೆಂದು ನಿಮಗೆ ಗೊತ್ತಿದೆ. ಈಗ ಭಿಕಾರಿ ಆಗಿದ್ದೇನೆ, ಇದು ವಿಚಿತ್ರವಾಗಿದೆ. ಅಲ್ಲಿ ಒಬ್ಬರೇ ರಾಜ್ಯ ಮಾಡುವುದಿಲ್ಲ. ಅವರ ರಾಜ್ಯ ನಡೆಯುತ್ತದೆ. ಅವರಿಗೆ ಮಕ್ಕಳು ಇರುತ್ತಾರೆ. 1250 ವರ್ಷ ಕೇವಲ ಲಕ್ಷ್ಮೀ-ನಾರಾಯಣರು ಇರುತ್ತಾರೇನು. ಸತ್ಯಯುಗದ ಆಯಸ್ಸು ದೊಡ್ಡದೆಂದು ಹೇಳುತ್ತಾರೆ ಆದರೂ ಸಹ ಪ್ರಜೆಗಳು ಬೇಕಲ್ಲವೇ. ನಿಮ್ಮ ಬುದ್ಧಿಯಲ್ಲಿ ಜ್ಞಾನದ ಪರಾಕಾಷ್ಟ ಇರಬೇಕು.

ಭಾರತ ಸ್ವರ್ಗವಾಗಿದೆ ಎಂದು ಚಿತ್ರವನ್ನು ಇಟ್ಟು ನೀವು ಯಾರಿಗಾದರೂ ತಿಳಿಸಿ. ಈಗ ಹಳೆಯ ಪ್ರಪಂಚ ನರಕವಾಗಿದೆ, ನಾವು ಸ್ವರ್ಗವಾಸಿ ಆಗಿದ್ದೆವು, ಈಗ ನರಕವಾಸಿ ಆಗಿದ್ದೇವೆ ಪುನಃ ಸ್ವರ್ಗವಾಸಿ ಆಗುತ್ತಿದ್ದೇವೆ ಎನ್ನುವುದು ಪಕ್ಕಾ ಆಗಿರಬೇಕು. ಸತ್ಯಯುಗದಲ್ಲಿ ಲಕ್ಷ್ಮೀ-ನಾರಾಯಣರ, ತ್ರೇತಾದಲ್ಲಿ ರಾಮ-ಸೀತೆಯರ ರಾಜ್ಯ ಇತ್ತು. ಎಲ್ಲರೂ ಸ್ವರ್ಗವಾಸಿ ಆಗಿದ್ದರು. ಈ ಚಕ್ರದಲ್ಲಿ 84 ಜನ್ಮದ ಚಕ್ರ ಸಿದ್ಧ ಆಗುತ್ತದೆ. ವೃಕ್ಷದಲ್ಲಿ ಹೇಗೆ ಪೂಜ್ಯನೀಯರಿಂದ ಬೀಳುತ್ತಾರೆ ಹಾಗೂ ಪೂಜಾರಿ ಆಗುತ್ತಾರೆ ಇದು ಸಿದ್ಧ ಆಗುತ್ತದೆ. ನಿಮಗೆ ಗೊತ್ತಿದೆ ಈ ಸಮಯದಲ್ಲಿ ಎಲ್ಲರೂ ನರಕವಾಸಿಗಳೇ ಏಕೆಂದರೆ ತಂದೆಯನ್ನು ತಿಳಿದುಕೊಂಡಿಲ್ಲ. ಈಗ ನಿಮಗೆ ಗೊತ್ತಿದೆ ಎಲ್ಲರೂ ಸ್ಮಶಾನದಲ್ಲಿ ಇದ್ದಾರೆ. ತಾವು ಮಕ್ಕಳು ಗುಪ್ತವಾಗಿದ್ದೀರಿ. ಆಂಗ್ಲಭಾಷೆಯಲ್ಲಿ ಅಂಡರ್ಗ್ರೌಂಡ್ ಎನ್ನುತ್ತಾರೆ. ಅಲ್ಲಿ ಯಾವುದೇ ಅಂಡರ್ಗ್ರೌಂಡ್ ಇರುವುದಿಲ್ಲ, ನೀವು ಮಕ್ಕಳು ಅಂಡರ್ಗ್ರೌಂಡ್ (ಗುಪ್ತ) ಆಗಿದ್ದೀರಿ. ಆದರೆ ನಿಮ್ಮನ್ನು ಯಾರೂ ತಿಳಿದುಕೊಂಡಿಲ್ಲ. ಇಲ್ಲಿ ಸನ್ಮುಖದಲ್ಲಿ ಕುಳಿತುಕೊಂಡರೆ ಮಜಾ ಆಗುತ್ತದೆ. ಬೇಹದ್ದಿನ ತಂದೆ ಪರಮಧಾಮದಿಂದ ಬಂದು ಇವರಲ್ಲಿ (ಬ್ರಹ್ಮಾರವರಲ್ಲಿ) ಪ್ರವೇಶವಾಗಿ ಓದಿಸುತ್ತಾರೆ. ಚಕ್ರದ ರಹಸ್ಯವನ್ನು ತಿಳಿಸುತ್ತಾರೆ. ಬಾಕಿ ಇಡೀ ದಿನ ಇವರಲ್ಲಿ ಇರುವುದಿಲ್ಲ. ನಾನು ಸೇವೆ ಮಾಡುತ್ತೇನೆ, ಮಕ್ಕಳ ಹೆಸರು ಪ್ರಸಿದ್ಧ ಮಾಡಲು ನಾನು ಪ್ರವೇಶ ಮಾಡುತ್ತೇನೆ ಎಂದು ತಂದೆ ಹೇಳುತ್ತಾರೆ. ಮಕ್ಕಳೇ ಸ್ವದರ್ಶನಚಕ್ರಧಾರಿ ಭವ, ಶಂಖುಧಾರಿ ಭವ ಎಂದು ತಂದೆ ಹೇಳುತ್ತಾರೆ. ನೀವು ಜ್ಞಾನದ ಶಂಖವನ್ನು ಬಾರಿಸಬೇಕು. ಶಂಖು ಎಂದಾದರೂ ಹೇಳಿ, ಮುರಳಿ ಎಂದಾದರೂ ಹೇಳಿ, ಒಂದೇ ಮಾತಾಗಿದೆ. ಅವರು ಕೃಷ್ಣನಿಗೆ ಮುರಳಿಯನ್ನು ತೋರಿಸಿದ್ದಾರೆ. ಕೃಷ್ಣ ರತ್ನಜಡಿತವಾದ ಮುರಳಿಯನ್ನು ಆಟ ಆಡುವ ಸಲುವಾಗಿ ಬಾರಿಸುತ್ತಾರೆ. ಅಲ್ಲಿ ಜ್ಞಾನದ ಮುರಳಿ ಇರುವುದಿಲ್ಲ. ಹೇಗೆ ಕಲ್ಪದ ಹಿಂದೆ ಸತ್ಯಯುಗದಲ್ಲಿ ಪಾರ್ಟ್ ಮಾಡಿದ್ದೇವೋ ಹಾಗೆಯೇ ಈಗಲೂ ಸಹ ಮಾಡುತ್ತೇವೆ ಎಂದು ತಾವು ಮಕ್ಕಳ ಬುದ್ಧಿಯಲ್ಲಿದೆ. ಬಾಕಿ ತಂದೆಯಿಂದ ಆಸ್ತಿಯನ್ನಂತೂ ತೆಗೆದುಕೊಳ್ಳಿ. ಆದರೆ ಮಕ್ಕಳು ಮನೆಗೆ ಹೋದರೆ ಮರೆತುಬಿಡುತ್ತಾರೆ. ಇಲ್ಲಿಂದಲೇ ಪಕ್ಕಾ ಆಗಿಬಿಡಿ ಎಂದು ತಂದೆ ಹೇಳುತ್ತಾರೆ. ವ್ಯಾಪಾರ-ವ್ಯವಹಾರವನ್ನು ಮಾಡಿ ಆದರೆ ನೆನಪು ಮಾಡುತ್ತೀರಿ. ಒಂದು ಸೆಕೆಂಡಿನ ಕೋರ್ಸ್ ತೆಗೆದುಕೊಳ್ಳಿ. ಹೇಗೆ ಬಹಳ ಜನ ವಿವಾಹದ ನಂತರವೂ ಓದುತ್ತಾರೆಯೋ ಹಾಗೆಯೇ ತಾವೂ ಸಹ ವ್ಯಾಪಾರವನ್ನು ಮಾಡುತ್ತಾ ಓದಿ. ಕುಮಾರ-ಕುಮಾರಿಯರಿಗೆ ಬಹಳ ಸಹಜವಾಗಿದೆ. ನನಗೆ ಒಬ್ಬ ತಂದೆಯ ವಿನಃ ಬೇರೆ ಯಾರೂ ಇಲ್ಲ -ಕೇವಲ ಇದು ಬುದ್ಧಿಯಲ್ಲಿರಬೇಕು. ಈ ರೀತಿ ಬ್ರಹ್ಮನಿಗೆ ಹೇಳುವುದಿಲ್ಲ.

ಯಾವಾಗಿನಿಂದ ನಿಶ್ಚಯವಾಗಿದೆ? ಎಂದು ತಂದೆಯು ಕೇಳುತ್ತಾರೆ. ಒಂದುವೇಳೆ ನಿಶ್ಚಯ ಆಗಿದ್ದೇ ಆದರೆ ಅಂತಹ ತಂದೆಯನ್ನು ಎಂದೂ ಸಹ ಬಿಡಬಾರದು. ತಾವು ಮಕ್ಕಳಿಗೆ ಬಹಳ ಖುಷಿ ಇರಬೇಕು. ಹೇಗೆ ಲಾಟರಿ ಸಿಕ್ಕಿದರೆ ಹುಚ್ಚರೂ ಸಹ ಆಗಿಬಿಡುತ್ತಾರೆ. ಆದರೆ ಇಲ್ಲಿ ಮಕ್ಕಳು ವ್ಯಾಪಾರ ಮಾಡುತ್ತಾ ಮರೆತು ಹೋಗುತ್ತಾರೆ. ಅಂದಾಗ ತಂದೆ ಇಷ್ಟು ದೊಡ್ಡ ಲಾಟರಿ ಕೊಟ್ಟರೂ ಸಹ ಹುಚ್ಚರಾಗಿದ್ದಾರೆಂದು ತಿಳಿದುಕೊಳ್ಳುತ್ತಾರೆ. ಅದೃಷ್ಟದಲ್ಲಿ ಇಲ್ಲವೆಂದರೆ ಆಗ ಮೂರ್ಖರನ್ನು ನೋಡಬೇಕೆಂದರೆ ಇಲ್ಲಿಯೇ ನೋಡಿ ಎಂದು ಹೇಳಲಾಗುತ್ತದೆ ಕಲ್ಪದ ನಂತರ ತಂದೆ ಸಿಕ್ಕಿದ್ದಾರೆ ಎಂದು ತಂದೆಯಂತೂ ಹೇಳುತ್ತಾರೆ. ಬಾಬಾ-ಬಾಬಾ ಎನ್ನುತ್ತಿರಿ, ಬೆಳಗ್ಗೆ ಎದ್ದು ನೆನಪು ಮಾಡಿ, ಯಾವುದು ಪ್ರಿಯ ವಸ್ತು ಆಗಿರುತ್ತದೋ ಅದರ ಮೇಲೆ ಬಲಿಯಾಗುತ್ತಾರೆ. ನಾವೂ ಸಹ ತಂದೆಯ ಮೇಲೆ ಬಲಿಯಾಗುತ್ತೇವೆ. ಜ್ಞಾನ ಕಸ್ತೂರಿ ಆಗಿದೆ. ನಾವು ಭಾರತದ ದೋಣಿಯನ್ನು ಪಾರು ಮಾಡುವಂತಹವರು. ಸತ್ಯನಾರಾಯಣ, ಅಮರನಾಥನ ಕಥೆ, ತೀಜರಿ ಕಥೆ ತಿಳಿಸುವಂತಹವರು, ಸತ್ಯ ತಂದೆಯ ಸತ್ಯ ಬ್ರಾಹ್ಮಣ ಮಕ್ಕಳಾಗಿದ್ದೀರಿ ಅಂದಾಗ ಒಳಗೆ ಯಾವುದೇ ಅಸತ್ಯತೆ ಇರಬಾರದು. ಅಸತ್ಯತೆ ಇದ್ದರೆ ಶ್ರೇಷ್ಠ ಪದವಿಯನ್ನು ಪಡೆಯಲು ಸಾಧ್ಯವಿಲ್ಲ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತ ಪಿತ ಬಾಪ್ದಾದಾರವರ ನೆನಪು ಪ್ರೀತಿ ಮತ್ತು ಗುಡ್ ಮಾರ್ನಿಂಗ್. ಆತ್ಮಿಕ ತ0ದೆಯ ಆತ್ಮಿಕ ಮಕ್ಕಳಿಗೆ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಸತ್ಯ ಬ್ರಾಹ್ಮಣರಾಗಬೇಕು. ಒಳಗೆ ಯಾವುದೇ ಅಸತ್ಯತೆ ಇರಬಾರದು. ಸ್ವದರ್ಶನಚಕ್ರಧಾರಿ ಆಗಿ ಶಂಖುಧ್ವನಿ ಮಾಡಬೇಕು. ವ್ಯಾಪಾರ ಮಾಡುತ್ತಿದ್ದರೂ ಸಹ ಈ ಕೋರ್ಸನ್ನು ಮಾಡಬೇಕು.

2. ತಂದೆಯ ಸಮಾನ ದಯಾಹೃದಯಿ ಆಗಿ ಅಂಧರಿಗೆ ಊರುಗೋಲು ಆಗಬೇಕು. ಮಾತಾ-ಪಿತರನ್ನು ಫಾಲೋ ಮಾಡುವ ಶ್ರೇಷ್ಠ ಪುರುಷಾರ್ಥ ಮಾಡಬೇಕು. ತಮ್ಮಕಾಲಿನಮೇಲೆ ನಿಂತುಕೊಳ್ಳಬೇಕು, ಯಾರನ್ನೂ ಸಹ ಆಧಾರವನ್ನಾಗಿ ಮಾಡಿಕೊಳ್ಳಬಾರದು.

ವರದಾನ: ಸದಾ ಹುಜೂರ್ ಅನ್ನು ಹಾಜಿರ್ ಎಂದು ತಿಳಿದು ಜೊತೆಯ ಅನುಭವ ಮಾಡುವಂತಹ ಕಂಭೈಂಡ್ ರೂಪಧಾರಿ ಭವ

ಮಕ್ಕಳು ಯಾವಾಗಲಾದರೂ ಸಹ ತಂದೆಯನ್ನು ಸ್ನೇಹದಿಂದ ನೆನಪು ಮಾಡಿದಾಗ ಸಮೀಪ ಮತ್ತು ಜೊತೆಯ ಅನುಭವ ಮಾಡುವರು. ಹೃದಯದಿಂದ ಬಾಬಾ ಎಂದಿರಿ ಮತ್ತು ದಿಲಾರಾಮ ಹಾಜಿರ್ ಇದಕ್ಕಾಗಿ ಹೇಳಲಾಗುವುದು ಹಜೂರ್ ಹಾಜಿರ್ ಆಗಿರುವರು ಎಂದು. ಸ್ನೇಹದ ವಿಧಿಯಿಂದ ಎಲ್ಲಾ ಸ್ಥಾನದಲ್ಲಿಯೂ ಪ್ರತಿಯೊಬ್ಬರ ಬಳಿ ಹಜೂರ್ ಹಾಜಿರ್ ಆಗಿಬಿಡುತ್ತಾರೆ, ಅನುಭವಿಗಳೇ ಈ ಅನುಭವವನ್ನು ತಿಳಿದಿರುತ್ತಾರೆ. ಮಾಡಿಮಾಡಿಸಲ್ಪಡುವವರು ಮಾಡುವವರು ಮತ್ತು ಮಾಡಿಸುವವರು ಕಂಬೈಂಡ್ ಆಗಿದ್ದಾರೆ. ಈ ರೀತಿ ಕಂಬೈಂಡ್ ರೂಪಧಾರಿ ಸದಾ ಜೊತೆಯ ಅನುಭವ ಮಡುತ್ತಾರೆ.

ಸ್ಲೋಗನ್: ಮನಸ್ಸನ್ನು ಸದಾ ಆತ್ಮೀಯ ಮೋಜಿನಲ್ಲಿಡಬೇಕು- ಇದೇ ಜೀವನ ಜೀವಿಸುವಂತಹ ಕಲೆಯಾಗಿದೆ.